ಆ) ಈ ಯೋಜನೆಗಳನ್ನು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ ಕೈಗೊಳ್ಳಬೇಕಿದ್ದು, ಮೇಷ್ಟೇರಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆಯ ಪ್ರಾಥಮಿಕ ತನಿಖಾ ವರದಿಯನ್ನು ತಯಾರಿಸಲಾಗಿದ್ದು, ವರದಿಯು ಪರಿಶೀಲನೆಯಲ್ಲಿದೆ. ಕವಲೆತ್ತು ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆಯ ಪ್ರಾಥಮಿಕ ತನಿಖೆ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ನಿಟವಳ್ಳಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆಯು ಹೊಸ ಪ್ರಸ್ತಾವನೆಯಾಗಿದ್ದು, ಸ್ಥಳ ವೀಕ್ಷಣೆ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಈ ಯೋಜನೆಗಳ ತಾಂತ್ರಿಕ ಮತ್ತು ಆರ್ಥಿಕ ಕಕ್ಷತೆ ಬಗ್ಗೆ ವಿವರವಾದ ಆನ್ವೇಷಣೆ ಕೈಗೊಂಡು ಈ ಯೋಜನೆಗಳು ಸಾಧುವೆಂದು ಕಂಡು ಬಂದಲ್ಲಿ ವಿವರವಾದ ಅಂದಾಜನ್ನು ತಯಾರಿಸಿ, ಆರ್ಥಿಕ ಸಂಸ್ಥೆಗಳಿಂದ ಸಾಲ ಸೌಲಭ್ಯ ಪಡೆದ ನಂತರ, ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಬೇಕಾಗುತ್ತದೆ.

ಇ) ವಿವರವಾದ ಆನ್ವೇಷಣೆ ನಡೆಸಿದ ನಂತರವೇ ಈ ವಿವರಗಳು ಗೊತ್ತಾಗುವುದು.

ಬೆಳಗಾವಿ ಜಿಲ್ಲೆಯ ಬೈಲ ಹೊಂಗಲ ತಾಲ್ಲೂಕು ಶ್ರೀ ಕಮಲನಾರಾಯಣ ದೇವಸ್ಥಾನದಲ್ಲಿ ಪ್ರವಾಸಿಗರಿಗಾಗಿ ಸೌಲಭ್ಯ

೧೪೦೦ (೨೨೪೪):- ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ):- ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಬೇಗಾಂವ ಗ್ರಾಮದ ೧೧ನೇ ಶತಮಾನದ ಶ್ರೀ ಕಮಲನಾರಾಯಣ ದೇವಸ್ಥಾನದ ಶಿಲ್ಪಕಲೆಯನ್ನು ನೋಡಲು ರಾಜ್ಯದ ನಾನಾ ಭಾಗಗಳಿಂದ ಪ್ರವಾಸಿಗರು ಬರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸ್ಥಳವಲ್ಲಿ ಪ್ರವಾಸಿಗರಿಗಾಗಿ ಸೌಲಭ್ಯಗಳನ್ನು ಒದಗಿಸಬೇಕೆಂಬ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಐತಿಹಾಸಿಕ ಶಿಲ್ಪಕಲೆಯನ್ನು ನೋಡಲು ಬರುತ್ತಿರುವ ಪ್ರವಾಸಿಗರಿಗೆ ಯಾವ ಯಾವ ಸೌಲಭ್ಯಗಳನ್ನು ಒದಗಿಸಿದ್ದಾರೆ?

ಈ) ಒಂದು ವೇಳೆ ಸೌಲಭ್ಯಗಳನ್ನು ಒದಗಿಸದೇ ಇದ್ದಲ್ಲಿ ಸರ್ಕಾರವು ಇನ್ನು ಮುಂದೆಯಾದರೂ ಪ್ರವಾಸಿಗರಿಗೆ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವರೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):-

ಅ) ಬಂದಿರುವುದಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಈ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಗುರುತಿಸುವ ಸಾಧ್ಯತೆ ಬಗ್ಗೆ ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ ನಡೆಸಿ ಪ್ರವಾಸಿ ಸೌಲಭ್ಯ ಒದಗಿಸುವ ಬಗ್ಗೆ ಪರಿಶೀಲಿಸಲಾಗುವುದು.